**ದಿನಾಂಕಃ 18/07/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಜಿ.ಜಿ ವಕೀಲರಿಂದಃ**

1. ಸರ್ವೆ ನಂ.70 ರಲ್ಲಿ ಬಾರ್ಸೆ ಯಿಂದ ಜಿ.ಜಿ.ಕೊಪ್ಪಲು ಗ್ರಾಮಕ್ಕೆ ಅನಧೀಕೃತವಾಗಿ ರಸ್ತೆ ಮಾಡಿದ್ದಾರೆ ಎಂದು ಹಂಸರಾಜೇ ಅರಸು ರವರ ಹೆಂಡತಿ ಇಂದ್ರಮ್ಮಣ್ಣಿ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆ ಸುಮಾರು 5-6 ವರ್ಷ ನಡೆದಿದೆ ಎಂದರೆ ನನಗೆ ಗೊತ್ತಿಲ್ಲ. ಬಾಲರಾಜೇ ಅರಸು, ಸುಬ್ಬರಾಜೇ ಅರಸು ಮತ್ತು ರಾಮರಾಜೇ ಅರಸು ರವರು ಅನಧೀಕೃತವಾಗಿ ಇಂದ್ರಮ್ಮಣ್ಣಿಯವರ ಆಸ್ತಿಯಲ್ಲಿ ರಸ್ತೆ ಮಾಡಿಸಿದ್ದಾರೆಂದು ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಇಂದ್ರಮ್ಮಣ್ಣಿಯವರು ಆ ದಾವೆಯಲ್ಲಿ ಸಾಕ್ಷಿ ನುಡಿಯುತ್ತಾ ಅವರ ಸ್ವತ್ತನ್ನು ಸರ್ಕಾರಿ ಶಾಲೆ ಕಟ್ಟಡ ಕಟ್ಟಲು ಸರ್ಕಾರಕ್ಕೆ ಬರೆದುಕೊಟ್ಟಿದ್ದೇನೆಂದು ನುಡಿದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಶಾಲೆ ಈಗ 7 ನೇ ತರಗತಿಯವರೆಗೂ ನಡೆಯುತ್ತಿದೆ ಎಂದರೆ ಸರಿ. ಸದರಿ ಶಾಲೆಯನ್ನು ಕಟ್ಟಿ ಸುಮಾರು 50-60 ವರ್ಷ ಕಳೆದಿದೆ ಎಂದರೆ ಸರಿ. ಆ ಶಾಲೆಯಲ್ಲಿ ಬಾರ್ಸೆ ಗ್ರಾಮದ ಮಕ್ಕಳು ಮತ್ತು ಜಿ.ಜಿ ಕೊಪ್ಪಲು ಗ್ರಾಮದ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರೆ ಸರಿ. ಜಿ.ಜಿ ಕೊಪ್ಪಲು ಗ್ರಾಮದ ರಸ್ತೆಯಿಂದ ಸದರಿ ಶಾಲೆಗೆ ಹೋಗಲು ಸರ್ವೆ ನಂ. 70 ರಲ್ಲಿ 10 ಅಡಿ ರಸ್ತೆ ಮಾಡಿದ್ದಾರೆ ಎಂದರೆ ಸರಿ, ಆದರೆ ಸರ್ವೆ ನಂಬರ್ ನನಗೆ ಗೊತ್ತಿಲ್ಲ. 10 ಅಡಿ ರಸ್ತೆ ಯಾವ ಸರ್ವೆ ನಂಬರ್ ನಲ್ಲಿ ಮಾಡಿದ್ದಾರೆಂದು ನಾನು ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ. ಸದರಿ ಶಾಲೆ ಸರ್ವೆ ನಂ. 70 ರಲ್ಲಿದೆ ಎಂದರೆ ಸರಿಯಲ್ಲ, ಆದರೆ ಸರ್ವೆ ನಂ.75 ರಲ್ಲಿದೆ. ಸರ್ವೆ ನಂ.75 ರಲ್ಲಿ ಒಂದೇ ಪೋಡು ಇದೆ.

2. ನಾನು ನಾಗಮ್ಮಣ್ಣಿಯವರಿಂದ ಸರ್ವೆ ನಂ.75/1 ರ ಜಮೀನನ್ನು ಖರೀದಿಸಿದ್ದೆ. ನಾಗಮ್ಮಣ್ಣಿಯವರ ಹೆಸರಿನಲ್ಲಿದ್ದ ಸ್ವತ್ತಿನ ದಾಖಲೆಗಳನ್ನು ಹಾಜರುಪಡಿಸಿಲ್ಲ. ಅವರ ಹೆಸರಿನಲ್ಲಿರುವ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಶಾಲೆಯ ಜಾಗ ಮೊದಲು ನಂಜುಂಡರಾಜೇ ಅರಸು ರವರ ತಂದೆ ಸುಬ್ಬರಾಜೇ ಅರಸು ರವರಿಗೆ

ಸೇರಿದ್ದು ಎಂದರೆ ಸರಿ. ಬಿ.ಎಸ್.ನಂಜುಂಡರಾಜೇ ಅರಸು ಬಿನ್ ಸುಬ್ಬರಾಜೇ ಅರಸು ರವರು ಸದರಿ ಶಾಲೆಯ ಜಾಗವನ್ನು ಸರ್ಕಾರಕ್ಕೆ ದಾನ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಚಕ್ಕುಬಂದಿ ಪೂರ್ವಕ್ಕೆ ನಾಗಮ್ಮಣ್ಣಿ ಯವರ ಜಮೀನು, ಪಶ್ಚಿಮಕ್ಕೆ ಸುಬ್ಬರಾಜೇ ಅರಸುರವರ ಬೇರೆ ಜಮೀನು, ದಕ್ಷಿಣಕ್ಕೆ ಸಿ.ರಾಮರಾಜೇ ಅರಸು ರವರ ಜಮೀನು, ಉತ್ತರಕ್ಕೆ ಸುಬ್ಬರಾಜೇ ಅರಸು ರವರ ಉಳಿಕೆ ಜಮೀನು ಈಗ ಹೇಳಿದ ಚಕ್ಕುಬಂದಿಯ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ. ನಾನು ಸರ್ವೆ ನಂ. 75/1 ರ ಜಮೀನಿಗೆ ಈ ದಾವೆಯನ್ನು ಹೂಡಿದ್ದೇನೆ. ನಂಜುಂಡರಾಜೇ ಅರಸು ರವರಿಂದ ಪಡೆದ ಸರ್ವೆ ನಂ. 75/2 ರ 124x156 ಅಡಿಗಳ ಜಾಗದಲ್ಲಿ ಶಾಲೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ.

3. ದಿಃ17/06/2010 ರಂದು ಕೆ.ಎನ್.ನಂಜುಂಡಯ್ಯ ರವರ ಹೆಂಡತಿ ವನಜಾಕ್ಷಿಯವರು ಸರ್ವೆ ನಂ.72/1 ರಲ್ಲಿ 1 ಎಕರೆ 13 ಗುಂಟೆಯನ್ನು ಸರ್ಕಾರಕ್ಕೆ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಅವರು ಕೊಟ್ಟ ದಾನದ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ನಾಗಮ್ಮಣ್ಣಿ ಕೋಂ ಈಶ್ವರರಾಜೇ ಅರಸು ರವರ ಜಮೀನು, ಪಶ್ಚಿಮಕ್ಕೆ ಅವರದೇ ಉಳಿಕೆ ಜಮೀನು, ಉತ್ತರಕ್ಕೆ ದಾನಕೊಟ್ಟವರ ಉಳಿಕೆ ಜಮೀನು, ದಕ್ಷಿಣಕ್ಕೆ ಸಿ.ರಾಮರಾಜೇ ಅರಸು ರವರ ಜಮೀನು ಎಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ರಾಮರಾಜೇ ಅರಸು ರವರ ಮಗ ಸುಬ್ಬರಾಜೇ ಅರಸು ಎಂಬುವವರು ಇದ್ದರು ಎಂದರೆ ಸರಿ. ಅವರು ಸರ್ಕಾರಕ್ಕೆ ಸರ್ವೆ ನಂ. 75/2 ಎಂದು ತಿದ್ದುಪಡಿ ಮಾಡಿಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 75/1 ರಲ್ಲಿ ನನಗೆ 30 ಗುಂಟೆ ಜಮೀನು ಇದೆ. ಸರ್ವೆ ನಂ. 75/1 ರಲ್ಲಿ ಕೃಷ್ಣರಾಜೇ ಅರಸು ರವರಿಗೆ 20 ಗುಂಟೆ, ಸುಬ್ಬರಾಜೇ ಅರಸು ರವರಿಗೆ 8 ಗುಂಟೆ ಜಮೀನು ಇದೆ. ನಂಜುಂಡರಾಜೇ ಅರಸು ರವರು ಸರ್ವೆ ನಂ. 75/2 ನ್ನು ಸರ್ಕಾರಕ್ಕೆ ದಾನಕೊಡುವ ಮುಂಚೆ ಸರ್ಕಾರದವರು ಶಾಲೆಯನ್ನು ಗ್ರಾಮಸ್ಥರ ಅಭಿಪ್ರಾಯದ ಮೇರೆಗೆ ಕಟ್ಟಿದ್ದರು ಎಂದರೆ ಸರಿಯಲ್ಲ. ದಿಃ28/07/2003 ರಂದು ನಂಜುಂಡರಾಜೇ ಅರಸುರವರು ಸರ್ವೆ ನಂ.75/2 ರ ಜಮೀನನ್ನು ಸರ್ಕಾರಕ್ಕೆ ಬರೆದುಕೊಟ್ಟರು ಎಂದರೆ ನನಗೆ ಗೊತ್ತಿಲ್ಲ.

4. ಸರ್ವೆ ನಂ. 75/1 ರಲ್ಲಿ 5 ಎಕರೆ 36 ಗುಂಟೆ ಇದ್ದು, 5 ಎಕರೆ 36 ಗುಂಟೆ ಇದೆ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿಲ್ಲ. ಅದರ ಚಕ್ಕುಬಂದಿ ಪೂರ್ವಕ್ಕೆ ರಾಮಚಂದ್ರರಾಜೇ ಅರಸುರವರ ಜಮೀನು, ಪಶ್ಚಿಮಕ್ಕೆ ರಸ್ತೆ ಮತ್ತು ಬಾರ್ಸೆ ಗ್ರಾಮ, ಉತ್ತರಕ್ಕೆ ರಸ್ತೆ ಮತ್ತು ಬಿ.ಎಸ್.ರಾಮಚಂದ್ರರಾಜೇ ಅರಸು ರವರ ಜಮೀನು, ದಕ್ಷಿಣಕ್ಕೆ ನಂಜುಂಡಯ್ಯ ರವರ ಜಮೀನು, ಈಗ ಅದನ್ನು ಸರ್ಕಾರಕ್ಕೆ ಬರೆದುಕೊಟ್ಟಿದ್ದಾರೆ. ದಕ್ಷಿಣಕ್ಕೆ ಬಿ.ಆರ್.ಗೋಪಾಲ ರಾಜೇ ಅರಸು ರವರ ಜಮೀನು ಸಹ ಇದೆ. ಸರ್ವೆ ನಂ. 75 ರಲ್ಲಿ 2 ಪೋಡುಗಳು ಇವೆ. ಸರ್ವೆ ನಂ. 75 ರಲ್ಲಿ 4 ಪೋಡುಗಳಾಗಿವೆ ಎಂದರೆ ಸರಿಯಲ್ಲ. ಸರ್ವೆ ನಂ.75/1 ರಲ್ಲಿ 30 ವರೆ ಗುಂಟೆ ಹಂಸರಾಜೇ ಅರಸು ಬಿನ್ ದೇವರಾಜೇ ಅರಸು ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತನ್ನು ಖರೀದಿಸುವಾಗ ಸರ್ವೇ ಸ್ಕೆಚ್ ಮಾಡಿಸಿಲ್ಲ, ಕಾರಣ ಅದು ಒಂದೇ ಆರ್.ಟಿ.ಸಿಯಲ್ಲಿತ್ತು. ಒಂದೇ ಸರ್ವೆ ನಂಬರ್ ನಲ್ಲಿ ಬೇರೆ ಬೇರೆ ಪೋಡುಗಳಿದ್ದರೆ ಸರ್ವೇ ಸ್ಕೆಚ್ ಬೇಕಾಗುತ್ತದೆ ಎಂದರೆ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಅದನ್ನು ನೊಂದಣಿ ಮಾಡಿಸುವ ಕಾಲಕ್ಕೆ ಸರ್ವೇ ಸ್ಕೆಚ್ ಕೇಳಿರಲಿಲ್ಲ. ಆರ್.ಟಿ.ಸಿ ದಾಖಲೆಯ ಮೇಲೆ ನೊಂದಣಿ ಮಾಡಿದ್ದರು. ದಾವಾಸ್ವತ್ತನ್ನು ಸರ್ವೇ ಮಾಡಿಸಿಲ್ಲದ ಕಾರಣ ನನಗೆ ನಿಖರವಾಗಿ ಸ್ವತ್ತು ಎಲ್ಲಿದೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ. ನಾನು ದಾವಾಸ್ವತ್ತನ್ನು ಖರೀದಿಸುವಾಗ ಅಳತೆ ಮಾಡಿಸಿದ್ದೆ. ಆಗ ಆಜುಬಾಜುದಾರರಿಗೆ ನೋಟೀಸನ್ನು ನೀಡಿದ್ದರು. ನಾನು ಕೊಟ್ಟ ಚಕ್ಕುಬಂದಿಯ ವಿವರ 30 ಗುಂಟೆಗೆ ನೀಡಿದ್ದು ಎಂದರೆ ಸರಿ. ನಾನು ವಾದಪತ್ರದಲ್ಲಿ ಶಾಲೆಯ ಚಕ್ಕುಬಂದಿ ಹಾಗೂ ಉಳಿಕೆ ಜಾಗದ ಜಾಗಕ್ಕೆ ಚಕ್ಕುಬಂದಿಯನ್ನು ನಮೂದಿಸಿದ್ದೇನೆ.

5. 9 ವರೆ ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ರಘುರಾಜೇ ಅರಸು ರವರ ಜಮೀನು, ಪಶ್ಚಿಮಕ್ಕೆ ಅಕ್ರಮವಾಗಿ ಕಟ್ಟಿರುವ ಶಾಲಾ ಕಟ್ಟಡ, ಉತ್ತರಕ್ಕೆ ರಸ್ತೆ ಮತ್ತು ಬಿ.ಎಸ್.ರಾಮಚಂದ್ರರಾಜೇ ಅರಸು ರವರ ಜಮೀನು, ದಕ್ಷಿಣಕ್ಕೆ ಶಾಲೆಗೆ ಸೇರಿದ ಜಮೀನು. ಶಾಲೆಯ ಕಟ್ಟಡದ ಚಕ್ಕುಬಂದಿಯನ್ನು ಪ್ರತ್ಯೇಕವಾಗಿ ನಮೂದಿಸಿಲ್ಲ.

6. ನಾನು ದಿಃ23/02/2014 ರಂದು ಸರ್ವೇ ಮಾಡಿಸಿದ್ದೆ. ನಾನು ತೋರಿಸಿಕೊಟ್ಟ ಜಾಗದಲ್ಲಿ ಸರ್ವೇಯರ್ ಸರ್ವೇ ಮಾಡಿಲ್ಲ. ಮಹಜರ್ ನಲ್ಲಿ ಸರ್ವೇಯರ್ ರವರು ತತ್ಕಾಲ್ ಪೋಡಿ ಮಾಡಲು ಆಗುವುದಿಲ್ಲವೆಂದು ನಮೂದಿಸಿದ್ದಾರೆ ಎಂದರೆ ಸರಿ. ಸರ್ವೇಯರ್ ಅಳತೆ ಮಾಡಿ ಸ್ಕೆಚ್ ನ್ನು ತಯಾರಿಸಿದ್ದರು. ಶಾಲಾ ಕಟ್ಟಡ ಸರ್ವೆ ನಂ. 75/2 ರಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಶಾಲಾ ಕಟ್ಟಡ ಸರ್ವೆ ನಂ. 75/1 ರಲ್ಲಿ ಇದೆ ಎಂದು ತಿಳಿದು ಈ ದಾವೆಯನ್ನು ಹೂಡಿದ್ದೇನೆ. ಸರ್ವೇಯರ್ ಸರ್ವೆ ನಂ.75/3 ರಲ್ಲಿ ನನ್ನ ಸ್ವತ್ತು ಇದೆಯೆಂದು ವರದಿ ನೀಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.4 ನ್ನು ಸಾಕ್ಷಿಗೆ ತೋರಿಸಿ ಸರ್ವೆ ನಂ.75 ರ 1 ನೇ ಪೋಡಿನಲ್ಲಿ ನಿಮ್ಮ ಹೆಸರು ಇದೆಯೇ ಎಂದರೆ ಇಲ್ಲವೆಂದು ನುಡಿಯುತ್ತಾರೆ. ಶಾಲಾ ಕಟ್ಟಡವನ್ನು ಪ್ರತಿವಾದಿಗಳು ಕಟ್ಟಿದ್ದಲ್ಲ ಎಂದರೆ ಸಾಕ್ಷಿಯು ಯಾರು ಕಟ್ಟಿದ್ದಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೊದಲು ಶಾಲೆಯನ್ನು ಕಟ್ಟಬೇಕಾದರೆ ಪಿರಿಯಾಪಟ್ಟಣ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಮತ್ತು ಸಮಿತಿಯವರ ಅನುಮತಿ ಮೇರೆಗೆ ಕಟ್ಟಬೇಕಾಗಿತ್ತು ಎಂದರೆ ಸರಿ. ಮೊಡಲು ಬಿ.ಡಿ.ಒ.ರವರು ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಣಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. ಬಿ.ಡಿ.ಒ ರವರ ಉಸ್ತುವಾರಿಯಲ್ಲಿ ಶಾಲಾ ಕಟ್ಟಡ ಕಟ್ಟಲಾಗುತ್ತಿತ್ತು ಎಂದರೆ ಸರಿ. ಶಾಲಾ ಕಟ್ಟಡ ಕಟ್ಟುವ ಕಾಲಕ್ಕಿದ್ದ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ.

7. ನಾನು ಸುಳ್ಳು ಪೋಡು ಮತ್ತು ಸುಳ್ಳು ಚಕ್ಕುಬಂದಿಯನ್ನು ನೀಡಿ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತನ್ನು ಖರೀದಿಸಿ 20 ವರ್ಷವಾಗಿದೆ. ಹಳೇ ಶಾಲಾ ಕಟ್ಟಡ ಹಾಗೇ ಮುಂದುವರೆದಿದೆ, ಆದರೆ ಹೊಸ ಕಟ್ಟಡವನ್ನು ಕಟ್ಟಿದ್ದಾರೆ. ಹೊಸ ಕಟ್ಟಡ ಕಟ್ಟಿದ ಬಗ್ಗೆ ದಾಖಲೆ ಇಲ್ಲ. ನಾನು ಸರ್ಕಾರಿ ಶಾಲೆಯ ಜಾಗವನ್ನು ಕಬಳಿಸಲು ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಸರ್ವೇಯರ್ ನನಗೆ ನೋಟೀಸು ನೀಡಲಿಲ್ಲ, ಆದರೆ ಮೌಖಿಕವಾಗಿ ತಿಳಿಸಿದ್ದರು. ಆಜುಬಾಜುದಾರಿಗೆ ನೋಟೀಸನ್ನು ನೀಡಿದ್ದರು. ಸರ್ವೇಯರ್ ಸ್ಥಳಕ್ಕೆ ಬರಬೇಕಾದರೆ ಮೂಲ ಮಾಲೀಕರಿಗೆ

ಮತ್ತು ಆಜುಬಾಜುದಾರರಿಗೆ ನೋಟೀಸು ನೀಡಬೇಕು ಎಂದರೆ ಸರಿ. ಸರ್ವೇಯರ್ ಮೌಖಿಕವಾಗಿ ತಿಳಿಸಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇಯರ್ ಮಹಜರ್ ನ್ನು ಶಾಲೆಯ ಹತ್ತಿರ ಬಂದು ಮಾಡಿದ್ದರು. ಯಾರ್ಯಾರು ಸಹಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ತಾತ್ಕಾಲ್ ಪೋಡಿ ಮಾಡಲು ಸಾಧ್ಯವಿಲ್ಲದೇ ಇದ್ದಾಗ ಎಷ್ಟು ವಿಸ್ತೀರ್ಣದ ಜಮೀನನ್ನು ಒತ್ತುವರಿ ಮಾಡಿದ್ದಾರೆಂದು ಸರ್ವೇಯರ್ ಗೆ ತಿಳಿಸಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ಶಾಲೆ ಇದೆ ಎಂದು ತತ್ಕಾಲ್ ಪೋಡಿ ಮಾಡಲಿಲ್ಲ ಎಂದು ನುಡಿಯುತ್ತಾರೆ. ಸರ್ವೇಯರ್ ಅಳತೆ ಮಾಡುವ ಸಮಯಕ್ಕೆ ನನ್ನ ಜಮೀನು, ಬಿ.ಸಿ.ಕೃಷ್ಣರಾಜೇ ಅರಸುರವರ ಜಮೀನು ಮತ್ತು ಸುಬ್ಬರಾಜೇ ಅರಸುರವರ ಜಮೀನನ್ನು ಅಳತೆ ಮಾಡಿದ್ದರು. ಸರ್ವೇಯರ್ ಶಾಲೆ ಇದೆ ಎಂದು ಯಾವುದೇ ಅಳತೆ ಮಾಡಿಲ್ಲ ಅದ್ದರಿಂದ ಒತ್ತುವರಿ ಮಾಡಿಲ್ಲದಿದ್ದರೂ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಅಳತೆ ಮಾಡುವುದನ್ನು ಪುಟ್ಟರಾಜೇ ಅರಸು, ದೇವರಾಜೇ ಅರಸು, ಗೋಪಾಲರಾಜೇ ಅರಸು, ಚಂದ್ರಶೇಖರ ರಾಜೇ ಅರಸು ಮತ್ತು ಇತರರು ನೋಡಿದ್ದಾರೆ. ಅವರೆಲ್ಲಾ ಸಹಿ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಈಗ ಹೇಳಿದ ವ್ಯಕ್ತಿಗಳು ಗ್ರಾಮದ ಪ್ರಮುಖ ವ್ಯಕ್ತಿಗಳು ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**